**ಪ್ರಧಾನ ಸಿವಿಲ್ ನ್ಯಾಯಾಧೀಶರವರ ನ್ಯಾಯಾಲಯ ಮತ್ತು ಜೆ ಎಂ ಎಫ್ ಸಿ, ಹರಿಹರ**

**ಸಿ.ಸಿ. 2560/2022**

**ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.** **ಪಿಡಬ್ಲ್ಯೂ 9**

**ದಿನಾಂಕಃ 22.06.2026** **ಸಿಡಬ್ಲ್ಯೂ 16**

| | |
|---|---|
| ಹೆಸರು | ಡಾ|| ಮಂಜುನಾಥ ಡಿ.ಎನ್. |
| ತಂದೆಯ ಹೆಸರು | ಲೇ. ನಾಗಲಿಂಗಪ್ಪ ಡಿಎನ್. |
| ವಯಸ್ಸು | 56 ವರ್ಷ |
| ಉದ್ಯೋಗ | ಡಿ.ಹೆಚ್.ಒ , ಬಾಗಲಕೋಟೆ |
| ವಾಸ ಸ್ಥಳ | ಬಾಗಲಕೋಟೆ |

**ಮುಖ್ಯ ವಿಚಾರಣೆಃ** ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ನಾನು ಮೇ 2013 ರಿಂದ ಜೂನ್ 2022 ರವರೆಗೆ ಸಿ ಜಿ ಆಸ್ಪತ್ರೆ, ದಾವಣಗೆರೆಯಲ್ಲಿ ಇ ಅಂಡ್ ಟಿ ತಜ್ಞರಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ16.02.2022 ರಂದು ಬೆಳಗಿನ ಜಾವಾ 3.11 ಗಂಟೆಗೆ ಅಪಘಾತದ ಹಿನ್ನೆಲೆಯಲ್ಲಿ ಚಿಕಿತ್ಸೆಗಾಗಿ ಬಂದಿದ್ದರು. ಅವರನ್ನು ಪರೀಕ್ಷಿಸಿದಾಗ ಅವರಿಗೆ

1) ಎಡಭುಜದ ಮೇಲೆ ಹರಿದ ಗಾಯವಾಗಿತ್ತು

2) ಎಡಮೊಣಕಾಲಿನ ಮೇಲೆ ಊತದ ಗಾಯವಾಗಿತ್ತು.

3) ಎಡಮೊಣಕಾಲಿನ ಮೇಲೆ ತರಚಿದ ಗಾಯವಾಗಿತ್ತು.

4) ಎಡಮುಂಗೈನಲ್ಲಿ ಊತದ ಗಾಯವಾಗಿತ್ತು.

ಅವರನ್ನು ಕ್ಷ-ಕಿರಣಕ್ಕೆ ಒಳಪಡಿಸಿದಾಗ ಅವರಿಗೆ ಯಾವುದೇ ಮೂಳೆ ಮುರಿತದ ಗಾಯಗಳಾಗಿರುವುದಿಲ್ಲ. ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳೆಂದು ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ.17 ಎಂದು ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.17 ಬಿ ಎಂದು ಗುರುತಿಸಲಾಯಿತು.

ಅದೇ ದಿನ ನಾನು ವಿನಾಯಕ ಎನ್ನುವವರನ್ನು ಪರೀಕ್ಷೆಗೆ ಒಳಪಡಿಸಿದಾಗ ಅವರಿಗೆ ಬೆನ್ನಿನ ಹಿಂಭಾಗದ ಬಲಭಾಗದಲ್ಲಿ ಊತದ ಗಾಯವಾಗಿದ್ದು, ಬಲಮುಂಗೈಯಲ್ಲಿ ಊತದ ಗಾಯವಾಗಿರುತ್ತದೆ. ಅವರನ್ನು ಕ್ಷ-ಕಿರಣಕ್ಕೆ ಒಳಪಡಿಸಿದಾಗ ಅವರಿಗೆ ಯಾವುದೇ ಮೂಳೆ ಮುರಿತದ ಗಾಯಗಳಾಗಿರುವುದಿಲ್ಲ. ಸದರಿ ಗಾಯಗಳು ಸಾದಾ ಸ್ವರೂಪದ ಗಾಯಗಳೆಂದು ನಾನು ಗಾಯದ ಪ್ರಮಾಣ ಪತ್ರವನ್ನು ನೀಡಿರುತ್ತೇನೆ. ಸಾಕ್ಷಿಯು ನಿಪಿ.16 ರಲ್ಲಿರುವ ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.16 ಬಿ ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಶ್ರೀ ಆರ್ ಜಿ ಬಿ ವಕೀಲರಿಂದಃ**

ನಿಪಿ.16 ಮತ್ತು 17 ರಲ್ಲಿರುವ ಗಾಯಗಳು ಸುಮಾನ್ಯವಾಗಿರುವ ಒಬ್ಬ ವ್ಯಕ್ತಿ ಗಿಡಗಂಟೆಗಳನ್ನು ತರಿಯುವಾಗ ತರಿಚಿದ ಗಾಯಗಳು ಆಗುತ್ತವೆ ಎಂದರೆ ಸರಿ. ಸಾಮಾನ್ಯವಾಗಿ ಒಬ್ಬ ವ್ಯಕ್ತಿ ರಸ್ತೆಯ ಮೇಲೆ

ಎಡವಿ ಬಿದ್ದಾಗ ಮೊಣಕಾಲುಗಳಿಗೆ ಊತದ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಸಾಮಾನ್ಯವಾಗಿ ಚೂಪಾದ ಯಾವುದೇ ವಸ್ತು ದೇಹಕ್ಕೆ ತಗುಲಿದಾಗ ಹರಿದ ಗಾಯಗಳು ಆಗುವ ಸಾಧ್ಯತೆ ಇರುತ್ತದೆ ಎಂದರೆ ಸರಿ. ಗಾಯಾಗಳುಗಳಿಗೆ ಯಾವುದೇ ಗಾಯಗಳು ಆಗಿರುವುದಿಲ್ಲ. ನಾನು ಪ್ರಕರಣಕ್ಕೆ ಅನುಕೂಲವಾಗಲಿ ಎಂದು ಪೋಲೀಸರ ಮಾತು ಕೇಳಿ ಸುಳ್ಳು ಗಾಯದ ಪ್ರಮಾಣಣ ಪತ್ರ ನೀಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ**

(ಮುಕ್ತ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚುಪಡಿಸಲಾಯಿತು.)

ಓದಿ ಹೇಳಿ ಕೇಳಿ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು

ಮತ್ತು ಜೆಎಂಎಫ್‌ಸಿ, ಹರಿಹರ